ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
Bruhat Bengaluru Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕೆಂಗೇರಿ ಉಪ ವಿಭಾಗ, ವಾರ್ಡ್ ನಂ.198, ಹೆಮ್ಮಿಗೆಪುರ

## ವಾರ್ಡ್ ಸಮಿತಿ ಸಭೆ ದಿನಾಂಕ: 19/03/2022ರ

## ಸಭಾ ನಡವಳಿ

ಸಕಾಅ/ಕೆಂಉವಿ/ವಾರ್ಡ್ ಕಮಿಟಿ-ಸಭೆ -17/2021-22 ದಿನಾಂಕ: 19.03.2022

ದಿನಾಂಕ: 19/03/2022 ರಂದು ಬೆಳಿಗ್ಗೆ 11.30 ಗಂಟೆಗೆ ವಾರ್ಡ್ ನಂ.198, ಹೆಮ್ಮಿಗೆಪುರ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯನ್ನು ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಪಟ್ಟಣಗೆರೆ, ಬಿ.ಬಿ.ಎಂ.ಪಿ. ಸಮುದಾಯಭವನ ಕಟ್ಟಡದಲ್ಲಿ ನಡೆದ ವಾರ್ಡ್ ಸಮಿತಿಯ ಸಭೆಯ ನಡವಳಿಗಳು

ಹಾಜರಿದ್ದವರು:

| ಕ್ರ ಸಂ | ಸಭೆಗೆ ಹಾಜರಾಗಿರುವ ಅಧಿಕಾರಿಗಳು | ಹುದ್ದೆ |
|---|---|---|
| 1 | ಶ್ರೀ ಶಿವಕುಮಾರ್ | ನೋಡಲ್ ಅಧಿಕಾರಿ, ವಾರ್ಡ್ ನಂ.198(ಹೆಮ್ಮಿಗೆಪುರ) ಹಾಗೂ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ಯಲಹಂಕ ~~[illegible]~~ ವಲಯ |
| 2 | ಶ್ರೀ ದಯಾನಂದ.ಎನ್ | ಸಹಾಯಕ ಅಭಿಯಂತರರು, ವಾರ್ಡ್-198, ಹೆಮ್ಮಿಗೆಪುರ |
| 3 | ಶ್ರೀ ರವಿಚಂದ್ರಚಾರಿ | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.198, ಹೆಮ್ಮಿಗೆಪುರ |
| 4 | ಶ್ರೀಮತಿ ಮೋನಿಕಾ | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.198, ಹೆಮ್ಮಿಗೆಪುರ |
| 5 | ಶ್ರೀ ಸಿ.ವಿ. ಸೂರ್ಯನಾರಾಯಣ | ಜಲ ಪರಿವೀಕ್ಷಕರು ಬೆಂಗಳೂರು ಜಲ ಮಂಡಳಿ |
| 6 | ಶ್ರೀ ಕೃಷ್ಣಾನಾಯಕ್ | ಕೆಲಸ ಪರಿವೀಕ್ಷಕರು ವಾರ್ಡ್ ನಂ.198, ಹೆಮ್ಮಿಗೆಪುರ |



Scanned with CamScanner

| ಕ್ರ.ಸಂ | ಸಭೆಗೆ ಗೈರು ಹಾಜರಾದ ಅಧಿಕಾರಿಗಳು | ಇಲಾಖೆ |
|---|---|---|
| 1 | ಸಹಾಯಕ ಅಭಿಯಂತರರು/ ಸಹಾಯಕ ಕಾರ್ಯಪಾಲಕ ಅಭಿಯಂತರರು | ಬೀದಿ ದೀಪ ನಿರ್ವಹಣೆ, ಬಿಬಿಎಂಪಿ, ರಾರಾ ನಗರ ವಲಯ |
| 2 | ಸಹಾಯಕ ಅಭಿಯಂತರರು/ ಸಹಾಯಕ ಕಾರ್ಯಪಾಲಕ ಅಭಿಯಂತರರು | ರಸ್ತೆ ಮೂಲ ಭೂತ ಸೌಕರ್ಯವಿಭಾಗ, ಬಿಬಿಎಂಪಿ, ರಾರಾನಗರ ವಲಯ |
| 3 | ಸಹಾಯಕ ಅಭಿಯಂತರರು/ ಸಹಾಯಕ ಕಾರ್ಯಪಾಲಕ ಅಭಿಯಂತರರು | ಬೃಹತ್ ನೀರುಗಾಲುವೆ ವಿಭಾಗ, ಬಿಬಿಎಂಪಿ, ರಾರಾನಗರ ವಲಯ |
| 4 | ಪಶುಪಾಲನಾ ಅಧಿಕಾರಿಗಳು | ಪಶುಪಾಲನಾ ಇಲಾಖೆ, ಬಿಬಿಎಂಪಿ ರಾಜರಾಜೇಶ್ವರಿನಗರ ವಲಯ, |
| 5 | ವಲಯ ಅರಣ್ಯ ಅಧಿಕಾರಿಗಳು | ಅರಣ್ಯ ಇಲಾಖೆ, ಬಿಬಿಎಂಪಿ, ರಾಜರಾಜೇಶ್ವರಿನಗರ ವಲಯ, |
| 6 | ತೋಟಗಾರಿಕಾ ಅಧಿಕ್ಷಕರು | ತೋಟಗಾರಿಕೆ ಇಲಾಖೆ, ಬಿಬಿಎಂಪಿ, ರಾಜರಾಜೇಶ್ವರಿನಗರ ವಲಯ, |
| 7 | ಸಹಾಯಕ ಅಭಿಯಂತರರು/ ಸಹಾಯಕ ಕಾರ್ಯಪಾಲಕ ಅಭಿಯಂತರರು | ಬೆಂಗಳೂರು ಜಲ ಮಂಡಳಿ |
| 8 | ಸಹಾಯಕ ಅಭಿಯಂತರರು/ ಸಹಾಯಕ ಕಾರ್ಯಪಾಲಕ ಅಭಿಯಂತರರು | ಬೆಸ್ಕಾಂ, ಕೆಂಗೇರಿ ಮತ್ತು ಬೆಸ್ಕಾಂ ತಲಘಟ್ಟಪುರ |
| 9 | ಪೊಲೀಸ್ ಇಲಾಖೆ | ಕೆಂಗೇರಿ, ರಾಜರಾಜೇಶ್ವರಿನಗರ ಮತ್ತು ತಲಘಟ್ಟಪುರ ಪೊಲೀಸ್ ಠಾಣೆ |
| 10 | ಗುತ್ತಿಗೆದಾರರು | ಘನತ್ಯಾಜ್ಯ ನಿರ್ವಹಣೆ, ಹೆಮ್ಮಿಗೆಪುರ ವಾರ್ಡ್ ನಂ.198 |

ಶ್ರೀ ದಯಾನಂದ.ಎನ್, ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಕಮಿಟಿ ಕಾರ್ಯದರ್ಶಿ ರವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ಸಭೆಗೆ ಹಾಜರಾಗಿದ್ದ ಅಧಿಕಾರಿಗಳನ್ನು ಹಾಗೂ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲರನ್ನೂ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ಹಿಂದಿನ ಸಭಾ ನಡವಳಿಯನ್ನು ಓದಿ ರೆಕಾರ್ಡ್ ಮಾಡಲಾಯಿತು ಮತ್ತು ತೆಗೆದುಕೊಂಡ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

❖ <u>ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ</u>:- ಅಧ್ಯಕ್ಷರು, ಕೋವಿಡ್-19ರ ಸಾಂಕ್ರಾಮಿಕ ರೋಗದ ಬಗ್ಗೆ ಹಾಗೂ ಸರ್ಕಾರ ಮತ್ತು ಬಿ.ಬಿ.ಎಂ.ಪಿ. ವತಿಯಿಂದ ನೀಡುತ್ತಿರುವ ಸೌಲಭ್ಯ/ಸೌವಲತ್ತುಗಳು ಹಾಗೂ



Scanned with CamScanner

ಕೋವಿಡ್ ಪರಿವೀಕ್ಷಣೆಯಿಂದ ಮೊದಲುಗೊಂಡು ಆಸ್ಪತ್ರೆಗೆ ದಾಖಲಾಗುವವರೆಗೆ ಮತ್ತು ಕೋವಿಡ್-19 ಪರೀಕ್ಷೆಯ ಬಗ್ಗೆ ಸವಿಸ್ತಾರವಾಗಿ ಸಭೆಗೆ ವಿವರಿಸಿದರು. ಕೋವಿಡ್-19ರ ಪರೀಕ್ಷೆಯನ್ನು ಹೆಚ್ಚು ಮಾಡುವ ಬಗ್ಗೆ ಸಹಕರಿಸುವಂತೆ ಸಭೆಯಲ್ಲಿದ್ದ ವೆಲ್‌ಫೇರ್ ಅಸೋಸಿಯೇಷನ್ ಅಧ್ಯಕ್ಷರುಗಳು ಮತ್ತು ಅಧಿಕಾರಿ ವರ್ಗದವರಿಗೆ ವಿನಂತಿಸಿ, ಆರೋಗ್ಯ ಪರಿವೀಕ್ಷಕರು ಮತ್ತು ಆರೋಗ್ಯಾಧಿಕಾರಿಗಳು ಸದರಿಯವರನ್ನು ಸಂಪರ್ಕಿಸಿ ಸಹಕಾರ ಪಡೆದುಕೊಳ್ಳಲು ಸೂಚಿಸಿದರು ಮತ್ತು ಮಾಷಲ್‌ಗಳನ್ನು ನಿಯೋಜಿಸಿ ಮಾಸ್ಕ್ ಧರಿಸದೇ ಇರುವವರಿಗೆ ದಂಡವನ್ನು ವಿಧಿಸಲು ಸೂಚಿಸಲಾಯಿತು ಹಾಗೂ ಕೋವಿಡ್-19 ವ್ಯಾಕ್ಸಿನ್ ಲಸಿಕೆಗಳನ್ನು ನೀಡುತ್ತಿರುವ ಸ್ಥಳ ವಿವರಗಳನ್ನು ಸಭೆಗೆ ತಿಳಿಸಲಾಯಿತು ಹಾಗೂ ಇತ್ತಿಗೆ ಕೋವಿಡ್‌ನ ರೂಪಾಂತರಿಯಾದ "ಓಮೈಕ್ರಾನ್" ವೈರಾಣು ಬೆಂಗಳೂರಿನಲ್ಲಿ ಪತ್ತೆಯಾಗಿದ್ದು, ಕೋವಿಡ್-19ರ ಬೂಸ್ಟರ್ ಲಸಿಕೆಯನ್ನು ಎಲ್ಲ ಹಿರಿಯ ನಾಗರೀಕರು ಪಡೆಯುವಂತೆ ಹಾಗೂ ಕೋವಿಡ್ ಸುರಕ್ಷತಾ ನಿಯಮಾವಳಿಯನ್ನು ತಪ್ಪದೇ ಪಾಲಿಸಲು ಸಭೆಯಲ್ಲಿ ಹಾಜರಿದ್ದ ಎಲ್ಲಾ ನಿವಾಸಿಗಳಿಗೆ ಹಾಗೂ ಬಡಾವಣೆಯ ಪ್ರತಿನಿಧಿಗಳಿಗೆ ತಿಳಿಸಲಾಯಿತು ಮತ್ತು ಕೋವಿಡ್ ಲಸಿಗಳ ಇದರ ಸದುಪಯೋಗ ಪಡೆಯಲು ಭಾಗವಹಿಸಿದ್ದ ಎಲ್ಲರಿಗೂ ಕೋರಲಾಯಿತು.

❖ <u>ಘನತ್ಯಾಜ್ಯ ನಿರ್ವಹಣೆ ಬಗ್ಗೆ</u> :- ವಾರ್ಡ್ ನಂ.198ರ ವ್ಯಾಪ್ತಿಯಲ್ಲಿ ಬರುವ ವಾಜರಹಳ್ಳಿ ಬಾಲಾಜಿ ಬಡಾವಣೆಯಲ್ಲಿ ರಸ್ತೆ ಗುಡಿಸುವ ಪೌರಕಾರ್ಮಿಕರ ಸಂಖ್ಯೆಯನ್ನು ಹೆಚ್ಚಿಸಬೇಕು ಮತ್ತು ಆಟೋ ಟಿಪ್ಪರ್‌ಗಳು ಸರಿಯಾದ ಸಮಯಕ್ಕೆ ಬರುತ್ತಿರುವುದಿಲ್ಲವೆಂದು ಮತ್ತು ವಾಟರ್ ಟ್ಯಾಂಕ್ ರಸ್ತೆಯಲ್ಲಿ ಪ್ರತಿ ದಿನ ರಸ್ತೆಯನ್ನು ಗುಡಸುತ್ತಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ಬಗ್ಗೆ ವಾರ್ಡ್‌ನ ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಹೆಮ್ಮಿಗೆಪುರ ವಾರ್ಡ್‌ನ ವಿಸ್ತೀರ್ಣವು ಅಗಾಧವಾಗಿದ್ದು, ಪೌರ ಕಾರ್ಮಿಕರ ಸಂಖ್ಯೆಯಲ್ಲಿ ಕೊರತೆ ಇರುವುದರಿಂದ ಹೆಚ್ಚಿನ ಪೌರಕಾರ್ಮಿಕರನ್ನು ನಿಯೋಜಿಸಲು ಸಾಧ್ಯವಾಗಿರುವುದಿಲ್ಲವೆಂದು ಸಭೆಯಲ್ಲಿ ತಿಳಿಸಿರುತ್ತಾರೆ.

❖ <u>ತೋಟಗಾರಿಕಾ ಇಲಾಖೆ, ರಾರಾನಗರ ವಲಯ ಬಿಬಿಎಂಪಿ</u> :- ವಾರ್ಡ್ ನಂ.198ರ ವ್ಯಾಪ್ತಿಯಲ್ಲಿ ಬರುವ ಬಿಸಿಎಂಸಿ ಬಡಾವಣೆ, ಬಾಲಾಜಿ ಬಡಾವಣೆ ಮತ್ತು ಜುಡಿಷಿಯಲ್ ಲೇಔಟ್‌ನಲ್ಲಿ ಇರುವ ಉದ್ಯಾನವನಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲವೆಂದು ಅಲ್ಲಿನ ನಿವಾಸಿಗಳು ಸಭೆಗೆ ತಿಳಿಸಿದರು. ಈ ಸಂಬಂಧ ನೋಡಲ್ ಅಧಿಕಾರಿಗಳು ಮಾತನಾಡಿ ಕಳೆದ 4-5 ಸಭೆಗಳಿಗೆ ತೋಟಗಾರಿಕಾ ಅಧೀಕ್ಷಕರ ಕಛೇರಿಯಿಂದ ಸಭೆಗೆ ಗೈರು ಹಾಜರಾಗುತ್ತಿರುವುದರಿಂದ ಸಭೆಯಲ್ಲಿ ಬರುವ ಸಾರ್ವಜನಿಕರ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಸಾಧ್ಯವಾಗುತ್ತಿರುವುದಿಲ್ಲವೆಂದು ಮತ್ತು ಇದರ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವ ಬಗ್ಗೆ ಸಭೆಗೆ ತಿಳಿಸಿದರು.



Scanned with CamScanner

❖ <u>ಬೆಂಗಳೂರು ವಿದ್ಯುತ್ ಸರಬರಾಜು ಕಂಪೆನಿ</u> :- ವಾರ್ಡ್ ನಂ.198ರ ವ್ಯಾಪ್ತಿಯಲ್ಲಿ ಬರುವ ತಲಘಟ್ಟಪುರ ಹಾಗೂ ಸುತ್ತಮುತ್ತಲಿನ ಹಳ್ಳಿಗಳ ಪ್ರದೇಶಗಳಲ್ಲಿ 11 ಕೆ.ವಿ. ವಿದ್ಯುತ್ ಕೇಬಲ್‌ಗಳನ್ನು ಅಳವಡಿಸಲಾಗುತ್ತಿದ್ದು, ರಸ್ತೆಯನ್ನು ಅಗೆದು ಸಮತಟ್ಟು ಮಾಡದೇ ಮತ್ತು ವಾಹನ ಸಂಚಾರಕ್ಕೆ ತೊಂದರೆಯಾಗುವ ರೀತಿ ಕೇಬಲ್‌ಗಳನ್ನು ರಸ್ತೆಯಲ್ಲಿಯೇ ತಿಂಗಳುಗಟ್ಟಲೆ ಬಿಟ್ಟು ಕೆಲಸವನ್ನು ಪೂರ್ಣಗೊಳಿಸದೇ ಸಾರ್ವಜನಿಕರಿಗೆ ಹಾಗೂ ಬಡಾವಣೆಯ ನಿವಾಸಿಗಳಿಗೆ ತೊಂದರೆ ಉಂಟು ಮಾಡುತ್ತಿರುವ ಬಗ್ಗೆ ಮತ್ತು ವಾಜರಹಳ್ಳಿಯ ಬಾಲಾಜಿ ಬಡಾವಣೆಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಮತ್ತು ಓಲ್ವೇಜ್ ಏರಿಳಿತದಿಂದ ತೊಂದರೆಯಾಗುತ್ತಿರುವ ಬಗ್ಗೆ ಸಭೆಯ ಗಮನಕ್ಕೆ ತರಲಾಯಿತು. ಈ ಸಂಬಂಧ ಸಭೆಯಲ್ಲಿ ಸದರಿ ವಿಷಯದ ಬಗ್ಗೆ ವಿವರಣೆ ನೀಡಬೇಕಾದ ಸಂಬಂಧಪಟ್ಟ ವಿದ್ಯುತ್ ಸರಬರಾಜು ಕಂಪೆನಿಯ ಅಧಿಕಾರಿಗಳು ಕಳೆದ ನಾಲ್ಕಾರು ವಾರ್ಡ್ ಸಮಿತಿ ಸಭೆಗಳಿಗೆ ಗೈರು ಹಾಜರಾಗುತ್ತಿರುವುದನ್ನು ಸಭೆಯು ಸಭೆಯು ಗಂಭೀರವಾಗಿ ಪರಿಗಣಿಸಿತು. ಈ ಸಂಬಂಧ ಬೆಂಗಳೂರು ವಿದ್ಯುತ್ ಸರಬರಾಜ ಕಂಪೆನಿಯ ಮೇಲಾಧಿಕಾರಿಗಳಿಗೆ ಸಭೆಗೆ ಹಾಜರಾಗಲು ಸೂಕ್ತ ನಿರ್ದೇಶನ ನೀಡಬೇಕೆಂದು ತೀರ್ಮಾನಿಸಲಾಯಿತು.

❖ <u>ಬೆಂಗಳೂರು ಜಲ ಮಂಡಳಿ</u>:- ವಾರ್ಡ್ ನಂ.198ರ ವ್ಯಾಪ್ತಿಯಲ್ಲಿ ಬರುವ ವಿಜಯಶ್ರೀ ಬಡಾವಣೆಯಲ್ಲಿ ಕುಡಿಯುವ ಕಾವೇರಿ ನೀರಿನ ಸರಬರಾಜು ಸಮರ್ಪಕವಾಗಿರುವುದಿಲ್ಲವೆಂದು ಸಭೆಗೆ ತಿಳಿಸಿದರು. ಈ ಸಂಬಂಧ ಸಭೆಯಲ್ಲಿ ಹಾಜರಿದ್ದ ಜಲಮಂಡಳಿಯ ಜಲಪರಿವೀಕ್ಷಕರು ಮಾತನಾಡಿ ಸ್ಥಳಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಮತ್ತು ಸಮಸ್ಯೆಯನ್ನು ಪರಿಹರಿಸಲಾಗುವುದೆಂದು ಸಭೆಗೆ ತಿಳಿಸಿದರು.

❖ <u>ವಿದ್ಯುತ್ ಬೀದಿ ದೀಪ</u>:- ವಾರ್ಡ್ ನಂ.198ರ ವ್ಯಾಪ್ತಿಯಲ್ಲಿ ಬರುವ ವಾಜರಹಳ್ಳಿಯ ಬಾಲಾಜಿ ಬಡಾವಣೆಯ ಉದ್ಯಾನವನದಲ್ಲಿ ಬೀದಿ ದೀಪದ ವ್ಯವಸ್ಥೆ ಇಲ್ಲವೆಂದು ಮತ್ತು ಹಲವಾರು ವಾರ್ಡ್ ಕಮಿಟಿ ಸಭೆಯಲ್ಲಿ ಈ ಸಂಬಂಧ ಮನವಿ ಸಲ್ಲಿಸಿದ್ದರೂ ಸಹ ಸಮಸ್ಯೆ ಪರಿಹಾವಾಗಿರುವುದಿಲ್ಲವೆಂದು ಸಭೆಗೆ ತಿಳಿಸಿದರು. ಈ ಸಂಬಂಧ ನೋಡಲ್ ಅಧಿಕಾರಿಗಳು ಮಾತನಾಡಿ ವಿದ್ಯುತ್ ಬೀದಿ ದೀಪದ ವಿಭಾಗದಿಂದ ಅಧಿಕಾರಿಗಳಾಗಲೀ ಅಥವಾ ಗುತ್ತಿಗೆದಾರರಾಗಲಿ ಈ ವಾರ್ಡ್ ಕಮಿಟಿ ಸಭೆಗೆ ಸತತವಾಗಿ ಗೈರುಹಾಜರಾಗುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿ ಮೇಲಾಧಿಕಾರಿಗಳಿಗೆ ಕೋರಲು ಸಭೆಯಲ್ಲಿ ತೀರ್ಮಾನಿಸಿದರು.

| | |
|---|---|
| (ದಯಾನಂದ.ಎನ್) | (ಶಿವಕುಮಾರ್) |
| ಕಾರ್ಯದರ್ಶಿ | ನೋಡಲ್ ಅಧಿಕಾರಿ |
| ಹಾಗೂ ಸಹಾಯಕ ಅಭಿಯಂತರರು | ವಾರ್ಡ್ ಸಮಿತಿ |
| ವಾರ್ಡ್-198, ಹೆಮ್ಮಿಗೆಪುರ | ವಾರ್ಡ್-198, ಹೆಮ್ಮಿಗೆಪುರ |

<u>ಪ್ರತಿಯನ್ನು</u>:-

1) ಮಾನ್ಯ ಸಹಕಾರ ಸಚಿವರು, ಕರ್ನಾಟಕ ಸರ್ಕಾರ ರವರ ಕಛೇರಿಗೆ ಸಲ್ಲಿಸಿದೆ.
2) ಕೌನ್ಸಿಲ್ ಕಾರ್ಯದರ್ಶಿ, ಬಿ.ಬಿ.ಎಂ.ಪಿ. ಕೇಂದ್ರ ಕಛೇರಿ ರವರ ಅವಗಾಹನೆಗೆ ಸಲ್ಲಿಸಿದೆ.
3) ಜಂಟಿ ಆಯುಕ್ತರು, ರಾಜರಾಜೇಶ್ವರಿನಗರ ವಲಯರವರ ಅವಗಾಹನೆಗೆ ಸಲ್ಲಿಸಿದೆ.



Scanned with CamScanner

4) ಮುಖ್ಯ ಅಭಿಯಂತರರು, ರಾಜರಾಜೇಶ್ವರಿನಗರ ವಲಯರವರ ಅವಗಾಹನೆಗೆ ಸಲ್ಲಿಸಿದೆ.
5) ಅಧೀಕ್ಷಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ, ರಾಜರಾಜೇಶ್ವರಿನಗರ ವಲಯರವರ ಅವಗಾಹನೆಗೆ ಸಲ್ಲಿಸಿದೆ.
6) ಕಾರ್ಯಪಾಲಕ ಅಭಿಯಂತರರು (ಕೆಂಗೇರಿ ವಿಭಾಗ) ರವರ ಅವಗಾಹನೆಗೆ ಸಲ್ಲಿಸಿದೆ.
7) ಕಂದಾಯ ಅಧಿಕಾರಿಗಳು (ಕೆಂಗೇರಿ ವಲಯ) ರವರ ಮಾಹಿತಿಗಾಗಿ ಹಾಗೂ ಮುಂದಿನ ಸಭೆಯಲ್ಲಿ ತಮ್ಮ ಕಛೇರಿಯ ಸಿಬ್ಬಂದಿಯನ್ನು ನಿಯೋಜಿಸಲು ಕೋರಿ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
8) ಕಾರ್ಯಪಾಲಕ ಅಭಿಯಂತರರು (ರಸ್ತೆ ಮೂಲಭೂತ ಸೌಕರ್ಯ, ರಾಜರಾಜೇಶ್ವರಿನಗರ ವಿಭಾಗ) ರವರ ಅವಗಾಹನೆಗೆ ಹಾಗೂ ಮುಂದಿನ ಸಭೆಯಲ್ಲಿ ತಮ್ಮ ಕಛೇರಿಯ ಸಿಬ್ಬಂದಿಯನ್ನು ನಿಯೋಜಿಸಲು ಕೋರಿ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
9) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲ ಮಂಡಳಿ, ರಾಜರಾಜೇಶ್ವರಿನಗರ ಉಪವಿಭಾಗ ರವರ ಮಾಹಿತಿಗಾಗಿ ಹಾಗೂ ಮುಂದಿನ ಸಭೆಯಲ್ಲಿ ತಮ್ಮ ಕಛೇರಿಯ ಸಿಬ್ಬಂದಿಯನ್ನು ನಿಯೋಜಿಸಲು ಕೋರಿ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
10) ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ, ರಾಜರಾಜೇಶ್ವರಿನಗರ ವಲಯ ರವರ ಮಾಹಿತಿಗಾಗಿ ಹಾಗೂ ಮುಂದಿನ ಸಭೆಯಲ್ಲಿ ತಮ್ಮ ಕಛೇರಿಯ ಸಿಬ್ಬಂದಿಯನ್ನು ನಿಯೋಜಿಸಲು ಕೋರಿ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
11) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ, ಕೆಂಗೇರಿ ರವರ ಮಾಹಿತಿಗಾಗಿ ಹಾಗೂ ಮುಂದಿನ ಸಭೆಯಲ್ಲಿ ತಮ್ಮ ಕಛೇರಿಯ ಸಿಬ್ಬಂದಿಯನ್ನು ನಿಯೋಜಿಸಲು ಕೋರಿ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
12) ತೋಟಗಾರಿಕಾ ಅಧೀಕ್ಷಕರು, ರಾಜರಾಜೇಶ್ವರಿನಗರ ವಲಯ ರವರ ಮಾಹಿತಿಗಾಗಿ ಹಾಗೂ ಮುಂದಿನ ಸಭೆಯಲ್ಲಿ ತಮ್ಮ ಕಛೇರಿಯ ಸಿಬ್ಬಂದಿಯನ್ನು ನಿಯೋಜಿಸಲು ಕೋರಿ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
13) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲ ಮಂಡಳಿ, ರಾಜರಾಜೇಶ್ವರಿನಗರ ಯೋಜನಾ (110 ಹಳ್ಳಿಗಳು) ಉಪವಿಭಾಗ ರವರ ಮಾಹಿತಿಗಾಗಿ ಹಾಗೂ ಮುಂದಿನ ಸಭೆಯಲ್ಲಿ ತಮ್ಮ ಕಛೇರಿಯ ಸಿಬ್ಬಂದಿಯನ್ನು ನಿಯೋಜಿಸಲು ಕೋರಿ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
14) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ, ಕೆಂಗೇರಿ ರವರ ಮಾಹಿತಿಗಾಗಿ ಹಾಗೂ ಮುಂದಿನ ಸಭೆಯಲ್ಲಿ ತಮ್ಮ ಕಛೇರಿಯ ಸಿಬ್ಬಂದಿಯನ್ನು ನಿಯೋಜಿಸಲು ಕೋರಿ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
15) ತೋಟಗಾರಿಕಾ ಅಧೀಕ್ಷಕರು, ರಾಜರಾಜೇಶ್ವರಿನಗರ ವಲಯ ರವರ ಮಾಹಿತಿಗಾಗಿ ಹಾಗೂ ಮುಂದಿನ ಸಭೆಯಲ್ಲಿ ತಮ್ಮ ಕಛೇರಿಯ ಸಿಬ್ಬಂದಿಯನ್ನು ನಿಯೋಜಿಸಲು ಕೋರಿ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
16) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲ ಮಂಡಳಿ, ರಾಜರಾಜೇಶ್ವರಿನಗರ ಯೋಜನಾ (110 ಹಳ್ಳಿಗಳು) ಉಪವಿಭಾಗ ರವರ ಮಾಹಿತಿಗಾಗಿ ಹಾಗೂ ಮುಂದಿನ ಸಭೆಯಲ್ಲಿ ತಮ್ಮ ಕಛೇರಿಯ ಸಿಬ್ಬಂದಿಯನ್ನು ನಿಯೋಜಿಸಲು ಕೋರಿ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.



Scanned with CamScanner